ಹೇಮಾವತಿ ಕಾಲುವೆಯಿಂದ ತುರುವೇಕೆರೆ ತಾಲ್ಲೂಕಿಗೆ ನೀರು ಸರಬರಾಜು

4488 - ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಹೇಮಾವತಿ ನೀರಾವರಿ ಕಾಲುವೆ ಕೆಲಸ ಪೂರ್ಣಗೊಂಡಿದ್ದು ಯಾವಾಗ?

ಆ) ಪೂರ್ಣಗೊಂಡಿದ್ದು ಇಷ್ಟು ದಿನಗಳು ಕಳೆದರೂ ಸಹ ಇದುವರೆವಿಗೂ ತುರುವೇಕೆರೆ ತಾಲ್ಲೂಕಿನಲ್ಲಿ ಸಣ್ಣ ಕಾಲುವೆಗಳಿಗೆ ನೀರು ಹರಿಸದೇ ಇರಲು ಕಾರಣಗಳೇನು?

ಇ) ಯಾವಾಗ ಬಗೆಹರಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) 1995-96ರಲ್ಲಿ ಮುಖ್ಯ ಕಾಲುವೆ ಪೂರ್ಣಗೊಂಡಿದೆ.

ಆ) ಸದರಿ ಅಚ್ಚುಕಟ್ಟನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಲು ಕಾಡಾ ಮತಿಯಿಂದ ಹೊಲಗಾಲುವೆ ಕೆಲಸ ಹಾಗೂ ಭೂ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಬೇಕಾಗಿದೆ.

ಇ) ಕಾಡಾ ಮತಿಯಿಂದ ಹೊಲಗಾಲುವೆ ಕೆಲಸಗಳನ್ನು ಪೂರ್ಣಗೊಳಿಸಿದ ನಂತರ ಬಗೆ ಹರಿಸಲಾಗುವುದು.

ಹಸಿರು ಪಡಿತರ ಚೀಟಿ ಸರಬರಾಜಾಗದಿರುವುದು

4489 - ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಒಟ್ಟು ಎಷ್ಟು ಜನ ಬಡತನ ರೇಖೆಗಿಂತ ಕೆಳಗೆ ಇರುವವರನ್ನು ಗುರುತಿಸಲಾಗಿದೆ?

ಆ) ತುರುವೇಕೆರೆ ತಾಲ್ಲೂಕಿನಲ್ಲಿ ಬಡತನ ರೇಖೆಗಿಂತ ಕೆಳಗಿರುವವರನ್ನು ಗುರುತಿಸುವಲ್ಲಿ ಲೋಪದೋಷವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಈ) ಈ ರೀತಿ ಗುರುತಿಸಲಾಗಿರುವ ಒಟ್ಟು ಎಷ್ಟು ಜನರಿಗೆ ಹಸಿರು ಪಡಿತರ ಚೀಟಿಗಳನ್ನು ನೀಡಲಾಗಿದೆ?

ಉ) ತುರುವೇಕೆರೆ ತಾಲ್ಲೂಕಿನಲ್ಲಿ ಆಗಿರುವ ಲೋಪವನ್ನು ಸರ್ಕಾರ ಯಾವ ರೀತಿ ಸರಿ ಮಾಡುತ್ತದೆ?